SEPTEMBER 04, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ರಾಜ್ಯದ ರೈತರು ಸಂಕಷ್ಟದಲ್ಲಿರುವ** ಸಂದರ್ಭ, ಬರ ಸೇರಿದಂತೆ, ಜ್ವಲಂತ ಸಮಸ್ಯೆಗಳನ್ನು ಚರ್ಚಿಸಲು ಕಳೆದ ಅಧಿವೇಶನದಲ್ಲಿ ಅವಕಾಶ ಸಿಗದ ಕಾರಣ, ಈ ತಿಂಗಳ 21, 22 ಹಾಗೂ 23 ರಂದು ವಿಶೇಷ ಅಧಿವೇಶನ ಕರೆಯಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದು ಉಪ ಮುಖ್ಯಮಂತ್ರಿ ಡಾಕ್ಟರ ಜಿ. ಪರಮೇಶ್ವರ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್ ಖಾತೆ ಮೂಲಕ ಮಾಹಿತಿ ಹಂಚಿಕೊಂಡಿರುವ ಅವರು, ಕಸ್ತೂರಿ ರಂಗನ್ ವರದಿ ಕುರಿತು ಅಧಿವೇಶನದಲ್ಲಿ ಚರ್ಚಿಸಲಾಗುವುದು ಎಂದಿದ್ದಾರೆ.

<><><>

**'ಪ್ರಧಾನಮಂತ್ರಿ ಮಿತ್ರ'** ಯೋಜನೆ ಅಡಿ, ದೇಶದಲ್ಲಿ ಸ್ಥಾಪನೆಗೊಂಡ, 7 ಮೆಗಾ ಟೆಕ್ಸಟೈಲ್ಸ್ ಪಾರ್ಕ್‌ಗಳಲ್ಲಿ, ಕಲಬುರಗಿ ಟೆಕ್ಸ್‌ಟೈಲ್ಸ್ ಪಾರ್ಕ್ ಕೂಡ ಒಂದು. ಕಲ್ಯಾಣ ಕರ್ನಾಟಕ, ಪ್ರದೇಶಾಭಿವೃದ್ಧಿ ಮಂಡಳಿ, ಇನ್ನೂರು ಕೋಟಿ ರೂಪಾಯಿ ಅನುದಾನ ಒದಗಿಸಿದೆ. ರಾಜ್ಯ ಸರ್ಕಾರ, ಸಾವಿರ ಎಕರೆ ಪ್ರದೇಶದಲ್ಲಿ, ಜವಳಿ ಪಾರ್ಕ್ ಅಭಿವೃದ್ಧಿಪಡಿಸುತ್ತಿದೆ. ಕಲ್ಯಾಣ ಕರ್ನಾಟಕ, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ, ಶರಣಬಸಪ್ಪ ಪಪ್ಪಾ ಮಾಹಿತಿ ನೀಡಿ, ಲಕ್ಷಾಂತರ ಯುವಜನರಿಗೆ, ಉದ್ಯೋಗಾವಕಾಶ ಸೃಷ್ಟಿಯಾಗಲಿವೆ, ಎಂದರು. ಭೌಗೋಳಿಕ ಮಾನ್ಯತೆ ಹೊಂದಿದ, ತೊಗರಿ ಬೇಳೆ ರಫ್ತಿಗೆ, ಯೋಜಿತ ಪ್ರಯತ್ನ ಕೈಗೊಳ್ಳಬೇಕಿದೆ ಎಂದು, ತಿಳಿಸಿದರು.

<><><>

**ಸ್ವಚ್ಛತೆ ಹಾಗೂ ಕಸ ವಿಲೇವಾರಿ ಕೇವಲ** ಪೌರಕಾರ್ಮಿಕರು, ಪಾಲಿಕೆ ಸಿಬ್ಬಂದಿ ಜವಾಬ್ದಾರಿಯಲ್ಲ. ಸ್ವಚ್ಛ ನಗರ ಹಾಗೂ ಸ್ವಚ್ಛ ಭಾರತ ನಿರ್ಮಾಣದಲ್ಲಿ ಪ್ರತಿಯೊಬ್ಬ ನಾಗರಿಕರೂ ಕೊಡುಗೆ ನೀಡಬೇಕು. ಸಾಧ್ಯವಾದಷ್ಟು ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಬಳಸುವ ಮೂಲಕ ತ್ಯಾಜ್ಯ ಉತ್ಪಾದನೆ ಕಡಿಮೆ ಮಾಡಬೇಕು ಎಂದು ರಾಯಚೂರು ಮಹಾನಗರ ಪಾಲಿಕೆ ವಲಯ ಆಯುಕ್ತ ಬಿ.ಎಂ ಮಲ್ಲಿಕಾರ್ಜುನ ಹೇಳಿದರು. ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿತ, ಘನತ್ಯಾಜ್ಯ ನಿರ್ವಹಣಾ ಅರಿವು ಕಾರ್ಯಾಗಾರದ ಕುರಿತು ಪ್ರದೇಶ ಸಮಾಚಾರಕ್ಕಾಗಿ ಅವರು ಮಾಹಿತಿ ನೀಡಿದರು.

<><><>

ಬಿ.ಎಂ ಮಲ್ಲಿಕಾರ್ಜುನ ಧ್ವನಿ– 42 ಸೆಕೆಂದುಗಳು

<><><>

**ಬಾಗಲಕೋಟೆ ಜಿಲ್ಲೆ, ಮುಗುಳೊಳ್ಳಿ ತಾಂಡಾದ,** ಸರ್ಕಾರಿ ಶಾಲೆಯ ಮೇಲ್ಛಾವಣಿ ಕುಸಿದ ಹಿನ್ನೆಲೆ, ಬೋಧನೆಗೆ ಯೋಗ್ಯವಲ್ಲದ, ಜಿಲ್ಲೆಯ ಎಲ್ಲ 628 ಕೊಠಡಿಗಳನ್ನು, 15 ದಿನಗಳ ಒಳಗೆ ಮರುಪರಿಶೀಲಿಸಿ, ಜಿಯೋ ಟ್ಯಾಗ್ ಛಾಯಾಚಿತ್ರಗಳೊಂದಿಗೆ, ಸಮಗ್ರ ವರದಿ ಸಲ್ಲಿಸುವಂತೆ, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಗಜಾನನ ಬಾಲೆ, ಸಂಬಂಧಿಸಿದ ಅಧಿಕಾರಿಗಳಿಗೆ, ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಅವರು ತುರ್ತು ಸಭೆ ನಡೆಸಿದರು.

<><><>

ಇಂದು ಶ್ರೀಕೃಷ್ಣ ಜನ್ಮಾಷ್ಟಮಿ. ನಾಡಿನ ವಿವಿಧೆಡೆ, ಹಬ್ಬವನ್ನು ಸಂಭ್ರಮ, ಸಡಗರದೊಂದಿಗೆ ಆಚರಿಸಲಾಗುತ್ತಿದೆ. ಉಡುಪಿ ಶ್ರೀಕೃಷ್ಣ ಮಠದಲ್ಲಿ, ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ವಿಟ್ಲಪಿಂಡಿ ಉತ್ಸವದ ಪ್ರಯುಕ್ತ ಎರಡೂವರೆ ಲಕ್ಷ ಚಕ್ಕುಲಿ, ಎಳ್ಳುಂಡೆ, ಅರಳುಂಡೆ ಸೇರಿದಂತೆ ವಿವಿಧ ಬಗೆಯ ಭಕ್ಷ್ಯ ತಯಾರಿ ಕಾರ್ಯ ನಡೆಯುತ್ತಿದೆ. 75 ಜನ ಬಾಣಸಿಗರು ಪ್ರಸಾದ ತಯಾರಿಕೆಯಲ್ಲಿ ತೊಡಗಿದ್ದಾರೆ. ಮಂಗಳೂರು, ಕದ್ರಿ ಶ್ರೀ ಮಂಜುನಾಥ ದೇವಸ್ಥಾನದ ಅಂಗಣದಲ್ಲಿ, ಜನ್ಮಾಷ್ಟಮಿ ಪ್ರಯುಕ್ತ ರಾಷ್ಟ್ರೀಯ ಮಕ್ಕಳ ಉತ್ಸವ ಹಾಗೂ ಶ್ರೀಕೃಷ್ಣ ವೇಷ ಸ್ಪರ್ಧೆ ಆಯೋಜಿತವಾಗಿದ್ದು, ಸಾವಿರಾರು ಸಂಖ್ಯೆಯ ಶ್ರೀಕೃಷ್ಣ ವೇಷಧಾರಿ ಪುಟಾಣಿಗಳು ಪಾಲ್ಗೊಂಡಿದ್ದಾರೆ. ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಉಪ ಮುಖ್ಯಮಂತ್ರಿ ಡಾಕ್ಟರ ಜಿ. ಪರಮೇಶ್ವರ ಸೇರಿದಂತೆ ಗಣ್ಯರು ನಾಡಿನ ಜನತೆಗೆ ಶ್ರೀಕೃಷ್ಣ ಜನ್ಮಾಷ್ಟಮಿ ಶುಭಾಶಯಗಳನ್ನು ತಿಳಿಸಿದ್ದಾರೆ.

<><><>

**ಗದಗ ಜಿಲ್ಲೆಯಾದ್ಯಂತ,** ಗಣೇಶ ಹಬ್ಬವನ್ನು, ಪರಿಸರ ಸ್ನೇಹಿಯಾಗಿ ಆಚರಿಸುವಂತೆ, ಗದಗ ಜಿಲ್ಲಾಧಿಕಾರಿ, ಸಿ.ಎನ್.ಶ್ರೀಧರ ಕೋರಿದ್ದಾರೆ. **(ಪಿಟಿಸಿ ಗದಗ–07)**

<><><>

**ಬೆಳಗಾವಿಯಲ್ಲಿ, ಸಡಗರದ ಗಣೇಶ** ಹಬ್ಬದಾಚರಣೆ ಹಿನ್ನೆಲೆ, ಮಹಾನಗರ ಪಾಲಿಕೆ ಮಹಾಪೌರರು, ಆಯುಕ್ತರು ನಗರ ಸಂಚಾರ ಕೈಗೊಂಡು, ಸಿದ್ಧತೆ ಪರಿಶೀಲಿಸಿದರು.

<><><>

**ಹುಬ್ಬಳ್ಳಿ, ಧಾರವಾಡದ ನೂತನ ಪೊಲೀಸ್ ಆಯುಕ್ತರಾಗಿ,** ಭೂಷಣ ಬೊರಸೆ ಅಧಿಕಾರ ಸ್ವೀಕರಿಸಿದ್ದಾರೆ.

<><><>

**ಪ್ರಧಾನ ಮಂತ್ರಿ ಕಿಸಾನ್** ಸಮ್ಮಾನ್ ನಿಧಿ ಯೋಜನೆಯಡಿ, ಸಹಾಯಧನ ಪಡೆಯುತ್ತಿರುವ ರೈತರು ಪ್ರತಿ ವರ್ಷ ಬಯೋಮೆಟ್ರಿಕ್ ಆಧಾರಿತ ಇ–ಕೆವೈಸಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪಿಎಂ –ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಒಟ್ಟು 1 ಲಕ್ಷ 48 ಸಾವಿರದ 960 ಫಲಾನುಭವಿಗಳ ಇ–ಕೆವೈಸಿ ಇನ್ನೂ ಬಾಕಿ ಇದೆ. ಇ–ಕೆವೈಸಿ ಪೂರ್ಣಗೊಳಿಸದ ರೈತರು ಸಮೀಪದ

ಗ್ರಾಹಕ ಸೇವಾ ಕೇಂದ್ರ, ಕರ್ನಾಟಕ ಒನ್ ಅಥವಾ ಗ್ರಾಮ ಒನ್ ಕೇಂದ್ರಗಳಿಗೆ ತೆರಳಿ ಇ- ಕೆವೈಸಿ ಮಾಡಿಸಿಕೊಳ್ಳುವಂತೆ  ಕೃಷಿ ಇಲಾಖೆ ಕೋರಿದೆ.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ** ತಾಲೂಕು, ಹೆಗ್ಗಡಿಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ, ವಿ.ಬಿ. ಜಿ ರಾಮ್ ಜಿ ಯೋಜನೆಯಡಿ, ಜಾಬ್ ಕಾರ್ಡ್ ಮೇಳ ಜರುಗಿತು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>